

# ಚಹಾ ಕೆಟಲ್ ಅಲ್ಲ ಮನೆ!



ವಾಸ್ತುಶಿಲ್ಪ ಹಲವಾರು ಅಚ್ಚರಿಗಳನ್ನು ತೆರೆದುಕೊಳ್ಳುತ್ತದೆ. ಕೆಲವು ಹಳೆಯ– ಹೊಸ ಕಟ್ಟಡಗಳು ಅದ್ಭುತವಾಗಿದ್ದು, ಥಟ್ಟನೆ ಕಣ್ಮುಂದೆ ನಿಲ್ಲುತ್ತವೆ.

'ಸೌಂದರ್ಯ ನೋಡುವವರ ಕಣ್ಣಲ್ಲಿದೆ' ಎನ್ನುವುದು ರೂಢಿಯಲ್ಲಿರುವ ಆಡುಮಾತು. ಕೆಲವೊಂದು ಕಟ್ಟಡಗಳು ವಸ್ತುಗಳ ಪ್ರತಿಕೃತಿಯಂತಿದ್ದು ಗಮನಸೆಳೆಯುತ್ತವೆ. ಮೆಕ್ಸಿಕೋದ ಗಲ್ಫ್‌ನ ಕರಾವಳಿಯ ಟೆಕ್ಸಾಸ್ ಹತ್ತಿರದ ಗೆಲ್ವೆಸ್ಟಾನ್ ಬಳಿ ಬಂದರೆ ನಿಮಗೊಂದು ಅಚ್ಚರಿ ಕಾಣಿಸುತ್ತದೆ. ಅದೇ ಚಹಾ ಕೆಟಲ್‌ನಂಥ ಕಟ್ಟಡ!

ಈ ಕಟ್ಟಡವನ್ನು ಎಣ್ಣೆ ಸಂಗ್ರಹಿಸಲು ಕಂಪನಿಗಳಿಗಾಗಿ ಟ್ಯಾಂಕ್‌ನಂತೆ ಕಟ್ಟಿಸಿರಬೇಕು ಎಂಬುದು ನೆರೆಹೊರೆಯವರ ಅನಿಸಿಕೆ. ಲೋಹ ಬಳಸಿ ಮಾಡಿದ ಈ ಕಟ್ಟಡ ಮುಗಿದಾಗ ಅದರ ಆಕಾರ ಕೆಟಲ್‌ನಂತೆ ಇದ್ದುದರಿಂದ ರೂಢಿಯಲ್ಲಿ ಈ ಹೆಸರು ಬಂತು. ಎಲ್ಲ ಹವಾಮಾನ ವೈಪರೀತ್ಯಗಳನ್ನೂ ಮೀರಿ ಈ ಕಟ್ಟಡ ಎದ್ದು ನಿಂತಿದೆ. 2009ಕ್ಕೆ ಇಕೆ ತೂಫಾನನ್ನು ಎದುರಿಸಿ 50 ವರ್ಷಗಳಿಂದ ಯಾವ ಹಾನಿಯೂ ಇಲ್ಲದೆ ಹಿರಿಮೆ ಮೆರೆದಿದೆ.

■ ಪ್ರಕಾಶ ಎಸ್. ಮನ್ನಂಗಿ